ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.

<u>ಸಿ.ಸಿ. ನಂ ಃ**33/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ಗುರುದತ್ತ ಕಾಮತ್ | ಸಿ.ಡಬ್ಲ್ಯೂ - 21 |
| ತಂದೆಯ ಹೆಸರು | ಃ ಅನಂತ್ | ಪಿ.ಡಬ್ಲ್ಯೂ -12 |
| ವಯಸ್ಸು | ಃ 45 ವರ್ಷ | |
| ಉದ್ಯೋಗ | ಃ ಸಿ.ಪಿ .ಐ. ಎನ್.ಆರ್.ಪುರ | |
| ವಾಸಸ್ಥಳ | ಃ ಎನ್ ಆರ್ ಪುರ. | |

ದಿನಾಂಕಃ **01.06.2026** ರಂದು ಪ್ರಮಾಣವಚನ ಬೋಧಿಸಲಾಯಿತು.
<u>ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ</u>

1. ನಾನು ದಿಃ 01/03/2024 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 27.03.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ಅದೇ ದಿನ KA-17 EV 7043 ಇದರ IMV ವರದಿಯನ್ನು ಚಾಸಾ-11 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

3. ಸಾಕ್ಷಿಯು ದಿಃ 27.03.2023 ರಂದು ತಾವು ಸ್ವೀಕರಿಸಿದ IMV ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಏ) ಎಂದು ಗುರುತಿಸಲಾಯಿತು.

ಸಿ ಸಿ ನಂಃ 33/2025
ಸಿಡಬ್ಲ್ಯೂಃ 21
ಪಿಡಬ್ಲ್ಯೂಃ 12

<u>ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀ **NVS** ವಕೀಲರಿಂದಃ</u>

1. ನಾನು ಚಾಸಾ 11 ರವರಿಂದ ವಾಹನ ತಪಾಸಣಾ ವರಿದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯ ಕಾಲಕ್ಕೆ ಆರೋಪಿತರ ವಿರುದ್ಧ ಯಾವುದೇ ಅಪರಾಧ ಕಂಡು ಬರದೆ ಇದ್ದರೂ ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು 2 ಮತ್ತು 3 ರ ಪರ ವಕೀಲರು 1 ನೇ ಆರೋಪಿ ಪರ ಪಾಟೀ ಸವಾಲು ಮಾಡಿದ ವಕೀಲರು ತಮ್ಮ ಪಾಟೀ ಸವಾಲು ಎಂದು ಒಪ್ಪಿಕೊಂಡಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ